



ಸ್ವಾಮಿ ನಿರ್ವಾಣಾನಂದರು ಶ್ರೀ ರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರ ಶಿಷ್ಯರು. ಬಹುಕಾಲ ಅವರ ಸೇವಕರಾಗಿದ್ದು ಅವರ ಆಧ್ಯಾತ್ಮಿಕ ಸಂಪತ್ತನ್ನು ತಮ್ಮದಾಗಿಸಿಕೊಂಡವರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಅವರ ಅನುಭವಾತ್ಮಕ ವಾಣಿ ಈ ಲೇಖನದಲ್ಲಿ ಮೂಡಿಬಂದಿದೆ. ಮೂಲ ಬಂಗಾಳಿಯಿಂದ ಅನುವಾದಿಸಿದವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾದ ಕುಮಾರಿ ಪಿ. ಉಷಾ.

## ಭಗವಂತನಲ್ಲಿ ಶರಣಾಗತಿ

ಮನುಷ್ಯನ ನಿಜವಾದ ಸಂಪತ್ತುಗಳೆಂದರೆ ತಪಸ್ಸು, ಸಂಯಮ, ವಿವೇಕ, ವೈರಾಗ್ಯ ಮತ್ತು ಸಚ್ಚರಿತ್ರೆಗಳು. ಈ ಸಂಪತ್ತುಗಳ ವಿನಾ ಆಧ್ಯಾತ್ಮಿಕ ಉನ್ನತಿ ಅಸಾಧ್ಯ. ಉನ್ನತಿಯ ಮಾತಿರಲಿ, ಇವುಗಳಿಲ್ಲದೆ ಆಧ್ಯಾತ್ಮಿಕ ಜೀವನಕ್ಕೆ ಅರ್ಥವೇ ಇಲ್ಲ. ಸ್ವಾರ್ಥ, ಅಹಂಕಾರ, ದುರಭಿಮಾನ, ಅಸೂಯೆ-ದ್ವೇಷ, ಪರಚರ್ಚೆ, ಪರನಿಂದೆ, ಇವೆಲ್ಲ ಆಧ್ಯಾತ್ಮಿಕ ಜೀವನಕ್ಕೆ ದೊಡ್ಡ ತಡೆಗಳು. ಇವುಗಳನ್ನು ತ್ಯಜಿಸಬೇಕು. ದುಸ್ಸಂಗ ಹಾಗು ತುಚ್ಛ ಆಶೆ-ಕಾಮನೆಗಳ ಅನುಸರಣೆ ಮಾಡುವುದು ಸಲ್ಲದು. ನಾವೆಲ್ಲಾ ನಮ್ಮ ಮನಸ್ಸಿನ ದಾಸರು. ಆದರೆ ಮನಸ್ಸನ್ನು 'ದಾಸ'ನನ್ನಾಗಿ ಮಾಡಿಕೊಳ್ಳಬಲ್ಲವರು ಎಷ್ಟು ಮಂದಿ? ಮನಸ್ಸನ್ನು 'ದಾಸ'ನನ್ನಾಗಿ ಮಾಡಿಕೊಳ್ಳಬೇಕು. ಅದಕ್ಕಾಗಿ ತ್ಯಾಗ, ತಪಸ್ಸು, ಸಂಯಮ, ವಿವೇಕ, ವೈರಾಗ್ಯಗಳು ಆವಶ್ಯಕ. ಆಧ್ಯಾತ್ಮಿಕ ಸಾಧನೆಗಳಲ್ಲಿ ಆಸಕ್ತಿ, ವಿವೇಕ, ವೈರಾಗ್ಯಗಳಿಲ್ಲದಿದ್ದರೆ ಶಾಂತಿ ಅಥವಾ ಆನಂದ ಸಿಗುವುದಾದರೂ ಹೇಗೆ? ಇರಬೇಕಾದುವೆಂದರೆ ಉತ್ತಮ ಚಾರಿತ್ರ್ಯ, ಸರಳತೆ, ಪವಿತ್ರತೆ ಹಾಗೂ ಮನೋವಾಕ್ಕಾಯವಾಗಿ ಭಗವಂತನಲ್ಲಿ ನಿರ್ಭರತೆ.

ಶ್ರೀರಾಮಕೃಷ್ಣರು 'ಇಚ್ಛಾ ಲಯ' ಎಂಬ ಮಾತನ್ನು ಹೇಳುತ್ತಿದ್ದರು. ಬಹಳ ಸುಂದರವಾದ ಮಾತು! ನಮ್ಮ ಸ್ವಂತ ಇಚ್ಛೆಯನ್ನು ಭಗವಂತನ ಇಚ್ಛೆಯಲ್ಲಿ 'ಲಯ'ಗೊಳಿಸಬೇಕು. ನಮಗೆ ಅದೆಂಥ ಸ್ಥಿತಿಯು ಪ್ರಾಪ್ತವಾಗಬೇಕೆಂದರೆ 'ನನ್ನ ಇಚ್ಛೆ' ಎಂಬುದು ಸ್ವಲ್ಪವೂ ಉಳಿಯದೆ ಎಲ್ಲವೂ 'ಆತನ ಇಚ್ಛೆ' 'ರಾಮನ ಇಚ್ಛೆ' ಆಗಬೇಕು. ಇದು ಬರಿಯ ಬಾಯಿ ಮಾತಾಗಬಾರದು. ಅದು ನಮ್ಮಲ್ಲಿ ಅಂತರ್ಗತವಾಗಬೇಕು. ಆಗ ನಮ್ಮ ಮನಸ್ಸನ್ನು ಹಿಡಿದಿಡಲು ಬೇರೆಯ ರೀತಿಯ ಪ್ರಯತ್ನ ಬೇಕಾಗಿಲ್ಲವೆಂದು ನಮಗೆ ತಿಳಿಯುತ್ತದೆ. ಆಗ ನಾಯಿಯಂತೆ ಮನಸ್ಸು ನಮ್ಮ ಕಾಲಿನ ಹತ್ತಿರ ಬಿದ್ದಿರುತ್ತದೆ.

### ಭಗವತ್ಕೃಪೆ

ನಾವು ಆಧ್ಯಾತ್ಮಿಕ ಸಾಧನೆ, ತಪಸ್ಸು, ವಿವೇಕ, ವೈರಾಗ್ಯಗಳ ಕುರಿತು ಮಾತನಾಡುತ್ತೇವೆ,ಅಷ್ಟೆ. ಆದರೆ ಇವುಗಳನ್ನು ನಾವು ಆಚರಿಸಬೇಕು. ಇದರೊಟ್ಟಿಗೆ ನಾವು ಅರಿಯಬೇಕಾದ ವಿಷಯವೆಂದರೆ 'ಎಲ್ಲವೂ ಆತನ ಕೃಪೆ' ಎಂದು. ಆತನ ಕೃಪೆಯನ್ನು ನಾವು ಅನುದಿನವೂ ಅವಶ್ಯವಾಗಿ ಪಡೆಯುತ್ತೇವೆ. ಆತನು ತನ್ನ ಕೃಪಾ ಭಂಡಾರವನ್ನು ತೆರೆದೇ ಇಟ್ಟಿದ್ದಾನೆ, ಸಿಹಿ ಬತ್ತಾಸುಗಳಂತೆ ತನ್ನ ಎರಡೂ ಕೈಗಳಲ್ಲಿ ತುಂಬಿಕೊಂಡು ವಿತರಿಸುತ್ತಾ ಹೋಗುತ್ತಿದ್ದಾನೆ. ಆದರೆ ದೌರ್ಭಾಗ್ಯವೆಂದರೆ ಅದನ್ನು ನಾವು ತಿಳಿಯಲಾಗುತ್ತಿಲ್ಲ. ಹೀಗಿರುವಾಗ ನಾವದನ್ನು ಹೇಗೆ ಸ್ವೀಕರಿಸಲಾದೀತು? ನಿಜವಾಗಿಯೂ ಆತನ ಕೃಪೆಯನ್ನು ಆತನ ಕೃಪೆಯಿಂದಲೇ ಅರಿಯಲು ಸಾಧ್ಯ. ಆತನ ಕೃಪೆಯಿಂದಲೇ ಆತನ ಕೃಪೆಗೆ ಅಧಿಕಾರಿಗಳಾಗಲು ಸಾಧ್ಯ. ಪ್ರತಿದಿನವೂ, ಪ್ರತಿಕ್ಷಣವೂ ಅಯಾಚಿತವಾಗಿಯೆ ಆತನ ಕೃಪೆಯು ನಮ್ಮ ಮೇಲೆ ವರ್ಷಿತವಾಗುತ್ತಿದೆ. ಆತನ ಕೃಪೆಯಾದರೆ ಇದನ್ನು ನಾವು ಗ್ರಹಿಸಬಲ್ಲೆವು. ನಮಗೆ ದುಃಖ ಬಂದಾಗ, ಆಘಾತಗಳಾದಾಗ, ನಮ್ಮ ಜೀವನದಲ್ಲಿ ದುರ್ದೈವ ಬಂದೊದಗಿದಾಗ, ಇವುಗಳ ಹಿನ್ನೆಲೆಯಲ್ಲಿ ಭಗವಂತನಿದ್ದಾನೆ ಎಂಬ ಅರಿವು ನಮಗಾಗುತ್ತದೆಯೆ? ಸಾಧಾರಣವಾಗಿ ತಿಳಿಯುವುದಿಲ್ಲ. ಅದನ್ನು ತಿಳಿದಾಕ್ಷಣವೇ ನಾವು ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತೇವೆ. ದುಃಖದ ಮಧ್ಯೆ, ವಿಪತ್ತಿನ ನಡುವೆ ಕರುಣಾಮಯನಾದ ಆತನೇ ಇರುವನೆಂದು ನಮ್ಮ ಅರಿವಿಗೆ ಬಂದಾಗ, ಆತನ ಕೃಪೆ ನಮ್ಮ ಮೇಲೆ ಆಗುತ್ತಿದೆ ಎಂದು ತಿಳಿಯುತ್ತದೆ. ಬರಿಯ ದುಃಖ ಬಂದಾಗ ಮಾತ್ರವಲ್ಲ, ಸುಖದ ಸಮಯದಲ್ಲೂ ಆತನನ್ನು ಮರೆಯಬಾರದು. ಈ ಸುಖವೂ ಆತನದೇ ಕೊಡುಗೆ ಎಂದು ತಿಳಿಯಬೇಕು. ದುಃಖದ ಸಮಯದಲ್ಲಿ ನಾವು ನೆನಪಿನಲ್ಲಿಡಬೇಕಾದುದೆಂದರೆ ಈ ದುಃಖದ ಹಿಂದೆ ಆತನದೇನೋ ಉದ್ದೇಶವಿದೆ ಎಂಬುದನ್ನು. ನಂತರ ಇದರಿಂದಲೇ ಸುಖ ಬರಲಿದೆ. ಈ ಅನುಭವವಾದಾಗ, ಆತನ ಕೃಪೆಯಿಂದಲೇ ಅದಾಗಿದೆ ಎಂದು ತಿಳಿಯಬೇಕು. ನಿಜವಾಗಿಯೂ ಕೂಡ

**ತೀವ್ರ ಭಾವಪರವಶತೆ ಪ್ರೀತಿಯ ಲಕ್ಷಣವಲ್ಲ. ನಾವು ಪ್ರೀತಿಸುವ ಭಗವಂತನಿಗಾಗಿ ಎಲ್ಲ ಕಷ್ಟಗಳನ್ನೂ ಅನಾಸಕ್ತಿಯಿಂದ, ತಾಳ್ಮೆಯಿಂದ ಸಹಿಸುವುದೇ ಪ್ರೀತಿಯ ನಿಜವಾದ ಲಕ್ಷಣ.**

—ಸೇಂಟ್ ಜಾನ್ ಆಫ್ ದಿ ಕ್ರಾಸ್.

ಆತನ ಕೃಪೆಯಿಂದಲೇ ಆತನ ಕೃಪೆಯ ಅರಿವಾಗುವುದು.

## ಸ್ವಪ್ರಯತ್ನ

ಪ್ರತಿಯೊಂದು ವಿಷಯದಲ್ಲಿಯೂ ಆತನ ಕೃಪೆಯಲ್ಲಿ ವಿಶ್ವಾಸವಿಡುವುದು ಅಧ್ಯಾತ್ಮಜೀವನದ ಒಂದು ಗುರುತ್ವಪೂರ್ಣ ಅಂಗ. ಈ ವಿಶ್ವಾಸವನ್ನೂ ನಮ್ಮ ಆಧ್ಯಾತ್ಮಿಕ ಚೇತನವನ್ನೂ ಸದೃಢಪಡಿಸಿಕೊಳ್ಳಲು ಅತ್ಯಂತ ಆವಶ್ಯಕವೆಂದರೆ '**ಸಾಧುಸಂಗ**'. ಸಾಧುಸಂಗದ ಫಲವಾಗಿ ಅಧ್ಯಾತ್ಮ ಜಾಗೃತಿಯಾಗುತ್ತದೆ ಹಾಗೂ ಭಗವಂತನಲ್ಲಿ ಶ್ರದ್ಧೆ ಅಧಿಕವಾಗುತ್ತದೆ. ಸದ್ಗ್ರಂಥ ಪಠನ, ತೀರ್ಥ ಯಾತ್ರೆ, ವ್ರತ-ಉಪವಾಸ, ಭಗವಂತನ ಸ್ಮರಣ-ಮನನ, ವ್ಯಾಕುಲತೆಗಳು ಆಧ್ಯಾತ್ಮಿಕ ಜೀವನವನ್ನು ರೂಪುಗೊಳಿಸಲು ಖಂಡಿತವಾಗಿಯೂ ಬಹಳ ಸಹಕಾರಿ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಭಗವಂತನನ್ನರಿತ ವ್ಯಕ್ತಿಯ ಸಾನ್ನಿಧ್ಯ ಹಾಗು ಮಾರ್ಗದರ್ಶನದ ಪಾತ್ರವು ಅಧ್ಯಾತ್ಮ ಜೀವನದಲ್ಲಿ ಎಲ್ಲಕ್ಕಿಂತ ಮಿಗಿಲಾದುದು.

ಆದರೆ ಈ ಜೀವನದಲ್ಲಿ ಎಲ್ಲದಕ್ಕಿಂತಲೂ ಹೆಚ್ಚು ಅಗತ್ಯವೆಂದರೆ, ಸ್ವಪ್ರಯತ್ನ—ಪುರುಷಕಾರ. ಶ್ರಮವಿಲ್ಲದೆ ಏನೂ ಲಭಿಸದು. ನೀಡಲೆಂದು ಭಗವಂತನು ಕೈಚಾಚಿದ್ದಾನೆ, ಆದರೆ ಪಡೆಯಲು ನಾವು ಶ್ರಮಿಸಬೇಕು.

'**ಯಾವಾಗಲೂ ಸತ್ಯ-ಅಸತ್ಯಗಳ ವಿವೇಚನೆ ಇರಬೇಕು, ಹಾಗು ಬಹಳವಾಗಿ ಶ್ರಮಿಸಬೇಕು**' ಎಂದು ಶ್ರೀಮಾತೆಯವರು ಹೇಳುತ್ತಾರೆ. ಆಲಸಿಗಳು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಾರೆ. ಅವರು ಜ್ಞಾನ-ವಿವೇಕಗಳನ್ನು ಕಳೆದುಕೊಂಡು ಅನೇಕ ಜನ್ಮಗಳ ದುಃಖ-ನೋವುಗಳನ್ನು ತಮ್ಮೊಂದಿಗೆ ಎಳೆದುಕೊಂಡು ಬರುತ್ತಾರೆ. ಆಧ್ಯಾತ್ಮಿಕ ಜೀವನದಲ್ಲಿ ಆಲಸ್ಯವು ಒಂದು ದೊಡ್ಡ ಅಡ್ಡಿ. ಧರ್ಮಜೀವನದಲ್ಲಿ ಆಲಸ್ಯಕ್ಕೆ ಯಾವ ಸ್ಥಾನವೂ ಇಲ್ಲ. ದುರ್ಬಲತೆ, ಆಲಸ್ಯಗಳು ಮನಸ್ಸಿನ ಸ್ವಭಾವಗಳು. ಆದರೆ ಪುರುಷಕಾರ, ಛಲ, ಸಂಯಮದ ಶಿಸ್ತಿನಿಂದ ಮನಸ್ಸನ್ನು ನಮ್ಮ ಇಷ್ಟದಂತೆ ನಮಗೆ ಬೇಕಾದ ದಾರಿಯಲ್ಲಿ ನಡೆಸಬಹುದು. ಮಾನವ ಜೀವನವೆ ಒಂದು ಸೌಭಾಗ್ಯ! ಆಲಸ್ಯ, ದುರ್ಬಲತೆಗಳು ಅದಕ್ಕೆ ಹಾನಿಯುಂಟುಮಾಡಿದರೆ, ತುಂಬಲಾರದ ನಷ್ಟವಾಗುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ಆಧ್ಯಾತ್ಮಿಕ ಸಾಧನೆಯನ್ನು ಪ್ರಾರಂಭಿಸಬೇಕು. ಸಾಧನೆಗೆ ಇದೇ ತಕ್ಕ ಸಮಯ. ವಯಸ್ಸು ಹೆಚ್ಚಾದಂತೆ ಶರೀರಶಕ್ತಿ ಕುಂದುತ್ತದೆ. ಮನಶ್ಶಕ್ತಿಯೂ ಕ್ಷೀಣಿಸುತ್ತ ಬರುತ್ತದೆ. '**ಬಲ-ಬುದ್ಧಿ-ಭರವಸೆ, ಮೂವತ್ತು ಕಳೆದರೆ ಇಲ್ಲ ಆಸೆ**', ಎಂದು ಸ್ವಾಮಿ ಬ್ರಹ್ಮಾನಂದರು ಹೇಳುತ್ತಿದ್ದರು. ಆದ್ದರಿಂದ ಸಾಧ್ಯವಾದಷ್ಟು ಸಮಯ ಸಾಧನೆ-ಭಜನೆಯಲ್ಲಿಯೇ ಕಳೆಯೋಣ. ಭಗವಂತನ ಸ್ಮರಣ-ಮನನ, ನಾಮಚಿಂತನೆಯಲ್ಲಿಯೇ ಕಳೆಯೋಣ. ಅಮಾವಾಸ್ಯೆ, ಪೌರ್ಣಮಿ, ಏಕಾದಶೀ, ದುರ್ಗಾಪೂಜೆಯ ಮೂರು ದಿನಗಳು, ಕಾಳೀಪೂಜೆ, ಜಗದ್ಧಾತ್ರೀ ಪೂಜೆ, ಶಿವರಾತ್ರಿ ಮುಂತಾದ ಸಂದರ್ಭಗಳಲ್ಲಿ ಉಪವಾಸ ಅಥವಾ ಅಲ್ಪಾಹಾರ ಬಹಳ ಒಳ್ಳೆಯದು. ಇದರಿಂದ ಮನಸ್ಸು ಶಾಂತವಾಗಿರುತ್ತದೆ, ಅಂಕೆಯಲ್ಲಿರುತ್ತದೆ. ಫಲವಾಗಿ, ಈ ದಿನಗಳಲ್ಲಿ ಹೆಚ್ಚು ಕಾಲ ಸಾಧನೆ ಮಾಡಬಹುದು. ಕೆಲದಿನಗಳ ನಂತರ, ಈ ದಿನಗಳನ್ನು ಹೀಗೆಯೇ ಕಳೆಯಬೇಕೆಂದೆನಿಸುತ್ತದೆ. ಈ ದಿವಸಗಳಲ್ಲಿ ಪ್ರಕೃತಿಯಲ್ಲಿ ವಿಶೇಷ ಆಧ್ಯಾತ್ಮಿಕ ತರಂಗಗಳು ಪ್ರವಾಹಿತವಾಗುತ್ತವೆ. ಸಂಯಮದ ಮೂಲಕ ಮನಸ್ಸನ್ನು ಶುದ್ಧಗೊಳಿಸಿದರೆ ಈ ತರಂಗಗಳ ಸ್ಪಂದನವನ್ನು ನಮ್ಮೊಳಗೆ ಅನುಭವಿಸಬಹುದು. ಈ ದಿನಗಳ ಸಂಧಿಕ್ಷಣಗಳು ಭಗವಂತನ ಸ್ಮರಣ-ಮನನಗಳಿಗೆ ವಿಶೇಷವಾಗಿ ಉಪಯುಕ್ತವೆಂದು ಗಮನಕೊಟ್ಟರೆ ತಿಳಿಯಬಹುದು. 'ಸಂಧಿ ಮುಹೂರ್ತ' ಎಂದರೆ ಉಷಃಕಾಲ, ದ್ವಿಪ್ರಹರ, ಪ್ರದೋಷ ಅಥವಾ ಸೂರ್ಯಾಸ್ತ ಮತ್ತು ರಾತ್ರಿಯ ಮೊದಲನೆ ಪ್ರಹರದ ಮಧ್ಯವರ್ತಿಕಾಲ ಮತ್ತು ಮಧ್ಯರಾತ್ರಿ. ಮಧ್ಯರಾತ್ರಿಗೆ 'ಮಹಾನಿಶಾ' ಎನ್ನುತ್ತಾರೆ. ಮಹಾನಿಶೆಯಲ್ಲಿ ಜಪ-ಧ್ಯಾನಗಳು ಚೆನ್ನಾಗಿ ಆಗುತ್ತವೆ. ಇಡೀ ಪ್ರಕೃತಿಯೇ ಆಗ ನಿಶ್ಶಬ್ದ ಹಾಗೂ ಶಾಂತವಾಗಿರುತ್ತದೆ —ಪ್ರಕೃತಿಯೇ ಸ್ವಯಂ ಭಗವಂತನ ಧ್ಯಾನದಲ್ಲಿ ಮಗ್ನವಾಗಿರುವಂತೆ!

## 'ಆತ್ಮಕೃಪೆ'

ಶ್ರೀರಾಮಕೃಷ್ಣರ ಶಿಷ್ಯರಿಂದ ಅನೇಕ ಬಾರಿ ಕೇಳಿದ್ದೇವೆ : ಭಗವಂತನು ಮಾತ್ರವೇ ನಮ್ಮವನು. ಪ್ರತಿಯೊಂದರಲ್ಲೂ ನಾವು ಅವನನ್ನೇ ನಂಬಿ ನಡೆಯಬೇಕು. ಅಭ್ಯಾಸ ಮತ್ತು ಶರಣಾಗತಿ ಇವೆರಡೂ ಧರ್ಮಜೀವನದ ಆವಶ್ಯಕತೆಗಳು. ಸತ್ಯವನ್ನು ನಾವೇ ಸಾಕ್ಷಾತ್ಕರಿಸಿಕೊಳ್ಳಬೇಕು. ಇಲ್ಲಿ '*proxy*' ನಡೆಯುವುದಿಲ್ಲ. ಇಷ್ಟದೇವರ ಕೃಪೆ, ಗುರುಕೃಪೆಗಳ ಪಾತ್ರ ಅವಶ್ಯವಾಗಿಯೂ ಇದೆ. ಆದರೆ ಅದನ್ನು ಗಳಿಸಲು 'ಆತ್ಮಕೃಪೆ' ಬೇಕು. ಆತ್ಮಕೃಪೆ, ಅಂದರೆ ಸ್ವಪ್ರಯತ್ನ ಅತ್ಯಂತ ಆವಶ್ಯಕ. ನಾನು ಒಂದು ಹೆಜ್ಜೆ ಮುಂದಿಟ್ಟರೆ ಭಗವಂತನು ನೂರು ಹೆಜ್ಜೆಗಳಷ್ಟು ನಮ್ಮ ಕಡೆಗೆ ಬರುವನು, ಎಂದು ಭಗವಂತನೇ ಹೇಳಿದ್ದಾನೆ. ಆದರೆ ಈ ಒಂದು ಹೆಜ್ಜೆಯನ್ನು ನಾನೇ ಮುಂದಿಡಬೇಕು.

**'ಗುರು, ಕೃಷ್ಣ, ವೈಷ್ಣವ ಮೂವರ ಕೃಪೆಯೂ ಆಯಿತು ಆದರೆ ಒಂದರ ಕೃಪೆಯಿಲ್ಲದೆ ಜೀವನವು ಮಣ್ಣುಪಾಲಾಯಿತು.**

ಒಂದರ ಕೃಪೆ, ಅರ್ಥಾತ್ ನಮ್ಮದೇ ಕೃಪೆ—ಆತ್ಮ-ಕೃಪೆ, ಮನಸ್ಸಿನ ಕೃಪೆ. 'ಗುರುಸ್ಥಾನ, ಇಷ್ಟಸ್ಥಾನ, ತೀರ್ಥಸ್ಥಾನಗಳಲ್ಲಿ ಯಾವ ವಿಶೇಷ ಸೌಕರ್ಯಗಳನ್ನೂ ಪಡೆಯಬಾರದು. ವಿಶೇಷ ಸೌಕರ್ಯಗಳನ್ನು ಪಡೆದು ಇಷ್ಟದೇವತೆಯ ವಿಗ್ರಹ ಅಥವಾ ಗುರುವಿನ ಬಳಿ ಸಾರಿದರೆ ಗುರುರೂಪಿಯಾದ ಇಷ್ಟದೇವತೆ, ವಿಗ್ರಹದಲ್ಲಿನ

ಅಂತರ್ಯಾಮಿಯಾದ ಭಗವಂತ ನಿಂದ ದೂರವೇ ಉಳಿಯುವೆವು.' ಎಂದು ಶ್ರೀರಾಮಕೃಷ್ಣರ ಶಿಷ್ಯರು ಹೇಳುತ್ತಿದ್ದರು. ಈ ಎಲ್ಲ ವಿಷಯ ಗಳಲ್ಲಿಯೂ ತುಂಬ ಜಾಗ್ರತೆಯಿಂದಿ ರಬೇಕು. ಇಲ್ಲದಿದ್ದರೆ ಧರ್ಮ ಜೀವನವು ಒಂದು ವಿಲಾಸಜೀವನ ವಾಗುತ್ತದೆ, ಪರಿಹಾಸವಾಗುತ್ತದೆ.

ಆಲಸ್ಯಂ ಹಿ ಮನುಷ್ಯಾಣಾಂ
ಶರೀರಸ್ಥೋ ಮಹಾನ್ ರಿಪುಃ।
ನಾಸ್ತ್ಯುದ್ಯಮಸಮೋ ಬಂಧುಃ
ಕೃತ್ವಾ ಯಂ ನಾವಸೀದತಿ ॥

ಮಾನವ ದೇಹದಲ್ಲಿಯೇ ಇರುವ ದೊಡ್ಡ ಶತ್ರುವೆಂದರೆ ಸೋಮಾರಿತನ. ಪ್ರಯತ್ನಕ್ಕೆ ಸಮ ಬಂಧುವಿಲ್ಲ. ಏಕೆಂದರೆ ಪ್ರಯತ್ನಶೀಲನು ಎಂದಿಗೂ ಹಾಳಾಗುವುದಿಲ್ಲ.

## ಸೇವೆಯ ಮಹತ್ವ

ನಾವು ಬಹಳ ಜಾಗ್ರತೆಯಿಂದಿರ ಬೇಕಾದ ಸಾಧನೆಯ ಮತ್ತೊಂದು ಅಂಶವೆಂದರೆ ಗುರುಸೇವೆ ಹಾಗೂ ಭಗವತ್ಸೇವೆಗಳು. ಭಗವತ್ಸೇವೆ, ಗುರುಸೇವೆ, ಸಾಧುಸೇವೆಗಳು ಬಹಳ ಕಠಿಣ. ಮನಸ್ಸಿನಲ್ಲಿ ಅಹಂಕಾರ ವಿದ್ದರೆ ನಿಜವಾದ ಸೇವೆ ಆಗದು. 'ಅಹಂ'ಶೂನ್ಯವಾದಷ್ಟು ಸೇವೆಯು ಸಾರ್ಥಕವಾಗುತ್ತದೆ. ಅಹಂಕಾರದಿಂದ ಮಾಡಿದ ಸೇವೆ ಅನರ್ಥಕರ. ಶ್ರೀರಾಮಕೃಷ್ಣರನ್ನು ನಾವು ನೋಡಿಲ್ಲ. ಆದರೆ ಅವರ ಶಿಷ್ಯರುಗಳನ್ನು ನಾವು ನೋಡಿದ್ದೇವೆ. ಶ್ರೀರಾಮಕೃಷ್ಣರ ಸೇವೆಯನ್ನು ಮಾಡುತ್ತ ಮಾಡುತ್ತ ಅವರಲ್ಲಿ ಆರನೆಯ ಇಂದ್ರಿಯವೊಂದು ಬೆಳೆದಿತ್ತೆಂಬು ದನ್ನು ನಾವು ಕೇಳಿದ್ದೇವೆ. ಶ್ರೀರಾಮಕೃಷ್ಣರು ಕೇಳುವ ಮುನ್ನವೇ ಅವರಿಗೇನು ಬೇಕು ಎಂಬುದನ್ನು ಅವರು ತಿಳಿದುಕೊಂಡು ಬಿಡು ತ್ತಿದ್ದರು. ' ಯಾವ ಸೇವಕನಿಗೆ ಯಾವಾಗಲೂ ಏನು ಬೇಕೆಂದು ಹೇಳಬೇಕಾಗುತ್ತದೆಯೋ ಅವನು ಅಧಮ ಸೇವಕ. ಹೇಳುವ ಮೊದಲೇ ತಿಳಿದುಕೊಳ್ಳುವವನು ಉತ್ತಮ ಸೇವಕ' ಎಂದು ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಹೇಳುತ್ತಿದ್ದರು. ಮಹಾ ರಾಜ್ (ಸ್ವಾಮಿ ಬ್ರಹ್ಮಾನಂದರು) 'ಯಾವ ಸೇವಕನಿಗೆ ಯಾವಾ ಗಲೂ ಅಗತ್ಯಗಳನ್ನು ತಿಳಿಯಹೇಳಬೇಕೊ ಅವನು ಅಧಮ ಸೇವಕ, ಯಾವ ಸೇವಕನು ತಾನಾಗಿಯೇ ನಿರ್ದಿಷ್ಟ ಸೇವೆಗಳನ್ನೆಲ್ಲಾ ಮಾಡು ವನೋ ಅವನು ಮಧ್ಯಮ ಸೇವಕ ಮತ್ತು ಯಾವ ಸೇವಕನು ನಿರ್ದಿಷ್ಟ ಸೇವೆಗಳ ಜೊತೆಗೆ ಸೇವ್ಯರ ಇಚ್ಛೆ ಹಾಗೂ ಅಗತ್ಯಗಳನ್ನು ತಿಳಿದು ಸೇವೆಯನ್ನು ಸಲ್ಲಿಸುತ್ತಾನೊ ಅವನು ಉತ್ತಮ ಸೇವಕ' ಎನ್ನು ತ್ತಿದ್ದರು.

ಮತ್ತೊಂದು ವಿಷಯ—'ಸೇವಾಪರಾಧ'ವೆಂಬುದು. ಸೇವೆ ಮಾಡುತ್ತಾ ಇದ್ದಂತೆ ಸೇವಕನಲ್ಲಿ ಹೊಸದಾಗಿ ಅಹಂಕಾರವು ತಲೆ ಯೆತ್ತುತ್ತದೆ. ಈ ಅಹಂಕಾರವು ಸೇವಕನ ಸೇವಾ ಮನೋಭಾವವನ್ನು ಕುಂಠಿತಗೊಳಿಸುತ್ತದೆ. ಸೇವ್ಯರ ಬಗ್ಗೆ ಅಸಡ್ಡೆ ಹಾಗೂ ಅಶ್ರದ್ಧಾ ಭಾವನೆಗಳು ಅವನಲ್ಲಿ ಬರುವ ಅಧಿಕಾರ ಬೋಧೆಯಿಂದ ಬೆಳೆ ಯುತ್ತದೆ. ಈ ಭಾವನೆಯಿಂದಾಗು ವುದು ಸೇವೆಯಲ್ಲ, ಸೇವೆಯ ಹೆಸರಿನಲ್ಲಿ ಅಪರಾಧ, ಎಂದು ಬೇರೆ ಹೇಳಬೇಕಿಲ್ಲ. ಇದನ್ನೇ 'ಸೇವಾ ಪರಾಧ' ಎನ್ನುವುದು. ಇದಕ್ಕಿಂತ ಹೆಚ್ಚಿನ ಅಪರಾಧ ಬೇರೊಂದಿಲ್ಲ. ಆದ್ದರಿಂದ ಸೇವಕನು ಯಾವ ರೀತಿಯ ಅಭಿಮಾನ ಅಹಂಕಾರಗಳೂ ಬಾರ ದಂತೆ ಎಚ್ಚರಿಕೆ ವಹಿಸಬೇಕು. ಅಹಂಕಾರರಹಿತ ಸೇವೆಯು ಗೃಹಸ್ಥ ಹಾಗೂ ಸಂನ್ಯಾಸಿಗಳಿಗಿಬ್ಬರಿಗೂ ಆದರ್ಶ. ಮನೆಗೆಲಸವೇ ಆಗಲಿ, ಆಶ್ರಮ-ಮಠಗಳ ಕಾರ್ಯವೇ ಆಗಲಿ, ಕಛೇರಿ-ಕಾರ್ಖಾನೆಗಳ ಕೆಲಸವೇ ಆಗಲಿ ಮತ್ತು ಮನೆಯಲ್ಲಿ ಅಡುಗೆಗಾಗಿ ತರಕಾರಿಗಳನ್ನು ಹೆಚ್ಚುವುದೇ ಆಗಲಿ, ಅಡುಗೆ ಕೆಲಸವೇ ಆಗಲಿ ಮತ್ತು ಪೂಜಾ ಕಾರ್ಯಗಳೇ ಆಗಲಿ, ಸರಿಯಾದ ಸೇವಾಭಾವದಿಂದ ಮಾಡಿದ್ದೇ ಆದರೆ ಅದರ ಫಲವು ಸರ್ವಕ್ಷೇತ್ರಗಳಲ್ಲಿಯೂ ಒಂದೇ—ಮನಸ್ಸಿನ ಪ್ರಸನ್ನತೆ. ಈ ಪ್ರಸನ್ನತೆಯೇ ಭಕ್ತನನ್ನು ಭಗವದ್ದರ್ಶನದೆಡೆಗೂ ಜ್ಞಾನಿಯನ್ನು ಬ್ರಹ್ಮಜ್ಞಾನದೆಡೆಗೂ ಕರೆದೊಯ್ಯುವುದು.

ಶ್ರೀರಾಮಕೃಷ್ಣರ ಶಿಷ್ಯರ ನಡೆ-ನುಡಿಗಳಲ್ಲಿ ಕಂಡುಬರುತ್ತಿದ್ದ ಈ ಸೇವಾ ಆದರ್ಶವನ್ನು ನಾವು ಮಠದಲ್ಲಿ ಅನುಸರಿಸುವ ಪ್ರಯತ್ನ ವನ್ನು ಮಾಡಿದ್ದೇವೆ. ಅವರ ಜೀವನ ವಿಧಾನ ಈ ಯುಗದ ಜನರ ಮುಂದೆ ಒಂದು ಮಾದರಿ ಅಥವಾ ಆದರ್ಶವಾಗಿದೆ. ಯಾರು ಈ ಆದರ್ಶವನ್ನು ಎಷ್ಟರಮಟ್ಟಿಗೆ ತನ್ನ ಜೀವನದಲ್ಲಿ ಪ್ರತಿಬಿಂಬಿಸು ತ್ತಾನೊ ಅವನ ಜೀವನವು ಅಷ್ಟೇ ಸಾರ್ಥಕವಾಗುತ್ತದೆ. ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನು ಇದೇ ಆದರ್ಶವನ್ನು ಜನರಿಗೆ ನೀಡಿದನು. ಸ್ವಾಮಿ ವಿವೇಕಾನಂದರು ಬಂದು ಈ ಯುಗದಲ್ಲಿ ಶ್ರೀಕೃಷ್ಣನ ಅದೇ ಆದರ್ಶವನ್ನು ಮತ್ತೆ ಹೊಸದಾಗಿ ನಮ್ಮೆಲ್ಲರೆದುರು ಎತ್ತಿ ಹಿಡಿದಿದ್ದಾರೆ. 'ಯಾವ ಕಾರ್ಯವೂ ಕೇವಲ ಕಾರ್ಯವಲ್ಲ. ಸರ್ವ ಕಾರ್ಯಗಳೂ ಸೇವೆ. ಸರ್ವಕಾರ್ಯಗಳೂ ಪೂಜೆ—ಉಪಾಸನೆ. ಮೊದಲು *work and worship*, ಅರ್ಥಾತ್ ಕಾರ್ಯ ಮತ್ತು ಪೂಜೆ. ನಂತರ *work as worship* ಅರ್ಥಾತ್ ಕಾರ್ಯವನ್ನು ಪೂಜೆಯಾಗಿ ನೋಡುವ ಪ್ರಯತ್ನ. ಕೊನೆಗೆ *work is worship* ಎಂದರೆ ಕಾರ್ಯವೇ ಪೂಜೆ,' ಎಂದು ಅವರು ಹೇಳಿದರು. ರಾಮಕೃಷ್ಣ ಮಠ-ಮಿಷನ್ನಿನ ಕಾರ್ಯಗಳಲ್ಲಿ ಈ ಆದರ್ಶದ ಫಲಶ್ರುತಿಯನ್ನು ನಾವು ಕಾಣುತ್ತೇವೆ.

❄

---

ಯಾವನು ಸ್ವಾರ್ಥೋದ್ದೇಶ ಇಲ್ಲದೆ ಇತರರಿಗಾಗಿ ಕೆಲಸ ಮಾಡುತ್ತಾನೋ,
* ಅವನು ತನಗೇ ಒಳ್ಳೆಯದನ್ನು ಮಾಡಿಕೊಳ್ಳುತ್ತಾನೆ. *

ಶ್ರೀರಾಮಕೃಷ್ಣ ಪರಮಹಂಸರು